ಇದನ್ನೆಲ್ಲಾ ಸರಿದಾರಿಗೆ ತರಬೇಕಾಗುತ್ತದೆ, ದಯಮಾಡಿ ಎಲ್ಲರೂ ಸಹಕರಿಸಬೇಕು; ದಯಮಾಡಿ ವಿರೋಧಪಕ್ಷದ ನಾಯಕರು, ಹಾಗೂ ಸದಸ್ಯರುಗಳು ತಮ್ಮ ಆಸನಗಳಿಗೆ ತೆರಳಬೇಕೆಂದು ವಿನಂತಿ ಮಾಡುತ್ತೇನೆ....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಚೆನ್ನಾಗಿರುವುದಿಲ್ಲ, ಇನ್ನು ಮುಂದೆ ನಾವು ಧರಣಿ ಮಾಡುತ್ತೇವೆ, ಸಭೆಯನ್ನೇ ಮಾಡಬೇಡಿ, ಇದು ಒಂದು ತಿಂಗಳು ಯಾರಿಗೂ ಬೇಕಾಗಿಲ್ಲ.

ಅಧ್ಯಕ್ಷರು : ಇಷ್ಟೊಂದು ಉಗ್ರರೂಪ ತಾಳಿದರೆ ಹೇಗೆ? ದಯಮಾಡಿ ಸಹಕರಿಸಬೇಕು, ಇದೆಲ್ಲಾ ಇದ್ದದ್ದೇ ಮಾನ್ಯ ಮಾಧುಸ್ವಾಮಿಯವರೆ, ತಾವೆಲ್ಲಾ ನೋಡಿರತಕ್ಕಂಥದ್ದು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗೌರವವಾದ, ಸರಿಯಾದ ಕ್ರಮ ಇದಲ್ಲ...

ಶ್ರೀ ಜೆ.ಸಿ. ಮಾಧುಸ್ವಾಮಿ : ಹೀಗೆ ಹೋದರೆ ಆ ಸ್ಥಾನಕ್ಕೆ ಗೌರವ ಬರುವುದಿಲ್ಲ ಸರ್,

ಶ್ರೀ ವಾಟಾಳ್ ನಾಗರಾಜ್ : ಏಕೆಂದರೆ ಈ ಸದನಕ್ಕೆ ಗೌರವ ಬರುವುದಿಲ್ಲ, ತಾವು ಸಭೆಯನ್ನು 11 ಗಂಟೆಗೆ ಕರೆಯಿರಿ, ನೀವು ಹನ್ನೊಂದು ಗಂಟೆಗೆ ಕರೆದು, 12 ಗಂಟೆಗೆ ಬರುವುದು, ಇಲ್ಲಿ ಕೋರಂ ಇರುವುದು, ಏಕೆ, ಏನು ಉದ್ದೇಶ;

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನಾವು ಕೆಲಸವಿಲ್ಲದೆ ಈ ಸಭೆಯಲ್ಲಿ ಕುಳಿತಿದ್ದೇವೆಯೇ?

ಅಧ್ಯಕ್ಷರು : ಈಗ ಬಾವಿಯಲ್ಲಿರುವ ಎಲ್ಲಾ ಸದಸ್ಯರು ದಯಮಾಡಿ ತಮ್ಮ ಆಸನಕ್ಕೆ ತೆರಳಬೇಕು, ಮಾನ್ಯ ಸಭಾನಾಯಕರು ಒಂದು ಹೇಳಿಕೆ ಮಾಡುತ್ತಾರೆ, ದಯಮಾಡಿ ಹೋಗಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

2. ನಿಯಮ 69ರ ಮೇರೆಗೆ ಚರ್ಚೆ

ವಿಷಯ:– ನೈಸ್ ಕಂಪನಿಯ ಪರವಾಗಿ ಮುಖ್ಯಮಂತ್ರಿಗಳಿಗೆ ಲಂಚದ ಆಮಿಷ ಒಡ್ಡಿದರು ಎಂಬ ಹೇಳಿಕೆಗೆ ಸ್ಪಷ್ಟೀಕರಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಸಭೆ ಪ್ರಾರಂಭವಾದ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಮತ್ತು

12.00 ಪಿಎಂ

ವಿರೋಧಪಕ್ಷದ ಸದಸ್ಯರುಗಳು, ನಾನು ಇತ್ತೀಚೆಗೆ ಕೆಲವು ದಿವಸಗಳ ಹಿಂದೆ ಕೊಟ್ಟಂಥ ಒಂದು ಹೇಳಿಕೆ, ಪತ್ರಿಕೆಗಳಲ್ಲಿ ಬಂದಂತಹ ವರದಿಯ ಮೇಲೆ, ಏನು ಕೆಲವು ಸಂಶಯಗಳನ್ನು ವ್ಯಕ್ತಪಡಿಸಿ ನನ್ನಿಂದ ಸ್ಪಷ್ಟೀಕರಣವನ್ನು ಕೇಳಿದ್ದರು; ಆ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೇಳಿದ್ದರು. ಆ ಸಂದರ್ಭದಲ್ಲಿ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ದವಿದೆ ಎಂದು ನಾನು ಹೇಳಿದ್ದೆ, ಪತ್ರಿಕೆಗಳಲ್ಲಿ ವಿಶ್ಲೇಷಣೆಗಳು ಬಂದಿವೆ, ಒಂದೊಂದು ಪತ್ರಿಕೆಯಲ್ಲೂ ಒಂದೊಂದು ರೀತಿಯಾಗಿ ವರದಿ ಬಂದಿರತಕ್ಕ ಸಂದರ್ಭದಲ್ಲಿ ನಾನು ಆ ದಿವಸ ಕೊಟ್ಟಿರತಕ್ಕ ಹೇಳಿಕೆ ಇದೆ. ಬಿಎಂಐಸಿ ಪ್ರಾಜೆಕ್ಟ್ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕಂಪನಿಯ ಮಾಲೀಕರು ಹಲವಾರು ದಿವಸಗಳಿಂದ ಏನು ಉದ್ಧಟತನದ ಹೇಳಿಕೆಗಳನ್ನು ಕೊಡುತ್ತಿದ್ದಾರೆ, ಅದನ್ನು ನಾನು ಗಮನಿಸಿದ್ದೇನೆ ಎನ್ನುವ ಪದವನ್ನು ಬಳಸಿದ್ದೇನೆ. ಅದರ ಜೊತೆಗೆ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಆ ಸಂದರ್ಭದಲ್ಲಿ ಒಬ್ಬ ಮಂತ್ರಿಗಳ ಜೊತೆಯಲ್ಲಿ ಮಾಲೀಕರು ಬಂದು ಏನು ನನ್ನ ಜೊತೆ ಚರ್ಚೆ ಮಾಡಿದ್ದಾರೆ ಹಾಗೂ ನಾನು ಮುಖ್ಯ ಮಂತ್ರಿಯಾದ ನಂತರ, ಒಬ್ಬ ಪತ್ರಿಕಾ ಸ್ನೇಹಿತರು ಬಂದು ಚರ್ಚೆಯನ್ನು ಮಾಡಿದ್ದಾರೆ, ಈ ವಿಷಯಗಳನ್ನು ಇನ್ ಕ್ಯಾಮರಾ ಮೀಟಿಂಗ್‌ನಲ್ಲಿ ಪತ್ರಿಕಾ ಸ್ನೇಹಿತರುಗಳು ಇದ್ದು; ಸಾರ್ವಜನಿಕರು ಆ ಸಭೆಯಲ್ಲಿ ಭಾಗವಹಿಸುವುದರ ಮುಖಾಂತರ ಏನು ಇತ್ತೀಚಿನ ದಿನಗಳಲ್ಲಿ ಆ ಕಾಮಗಾರಿ ಬಗ್ಗೆ ಹಲವಾರು ರೀತಿಯ ಪ್ರಸ್ತಾವನೆಗಳು ಜನಗಳ ಮುಂದೆ ಬರುತ್ತಿವೆ, ಇದರ ಬಗ್ಗೆ ಜನಗಳಲ್ಲಿ ಅಂತಿಮವಾಗಿ ಯಾರದ್ದು ಸರಿ, ಯಾರದ್ದು ತಪ್ಪು ಎನ್ನುವುದು ಜನರ ಗಮನಕ್ಕೆ ತರುವುದಕ್ಕೆ, ಮತ್ತು ಚರ್ಚೆ ಮಾಡಲಿಕ್ಕೆ ಆ ಕಂಪನಿಯ ಮಾಲೀಕರು ಬರಬೇಕೆಂದು ನಾನು ಮನವಿಯನ್ನು ಮಾಡಿದಂತಹ ಸನ್ನಿವೇಶದಲ್ಲಿ ನಾನು ಹೇಳಿರತಕ್ಕಂಥದ್ದು ಇಷ್ಟೆ. ಚರ್ಚೆಗೆ ಆಹ್ವಾನವನ್ನು ಏನು ಕೊಟ್ಟಿದ್ದೇನೆ, ಚರ್ಚೆಯನ್ನು ಮಾಡಿದ್ದಾರೆನ್ನುವ ಪದವನ್ನು ಮಾತ್ರ ಬಳಸಿದ್ದೇನೆ ಅಷ್ಟೆ. ಆದರೆ ಬೇರೆ ರೀತಿಯಲ್ಲಿ ನನಗೆ ಹಣದ ಆಮಿಷವನ್ನು ಒಡ್ಡಲಿಕ್ಕೆ ಬಂದಿದ್ದರು ಎಂದು ನಾನು ಎಲ್ಲೂ ಹೇಳಲಿಲ್ಲ. ಆದ್ದರಿಂದ ಸನ್ಮಾನ್ಯ ಸದಸ್ಯರಲ್ಲಿ ಏನು ಆ ವಿಷಯದ ಬಗ್ಗೆ ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ನಾನು ಹೇಳಿರತಕ್ಕಂಥದ್ದು ತಮ್ಮ ಮೂಲಕ ಇಂದು ಸಭೆಯ ಗಮನಕ್ಕೆ ತರುತ್ತಿದ್ದೇನೆ, ಇದು ಬಿಟ್ಟರೆ ಬೇರೆ ಯಾವುದೇ ರೀತಿಯ ಪದವನ್ನು ನಾನು ಬಳಸಿಲ್ಲ. ಆದುದರಿಂದ ಸನ್ಮಾನ್ಯ ಹಿರಿಯ ಸದಸ್ಯರುಗಳಲ್ಲಿ ಈ ವಿಷಯದಲ್ಲಿ ಏನಾದರೂ ನನ್ನ ಹೇಳಿಕೆ

ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದರ ಬಗ್ಗೆ ಅವರ ಭಾವನೆಗಳನ್ನು ಸದನದ ಮುಂದೆ ತರುವುದರ ಮುಖಾಂತರ, ಈ ಸದನದಲ್ಲಿ ಕಾರ್ಯಕಲಾಪಗಳು ನಡೆಸತಕ್ಕಂತಹ ಸಂದರ್ಭದಲ್ಲಿ, ನಾವು ಕೆಲವು ಮಾತುಗಳನ್ನು ಬಳಸತಕ್ಕಂತಹ ಸಂದರ್ಭದಲ್ಲಿ ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡಬೇಕಾದರೆ ಬಳಸತಕ್ಕಂತಹ ಪದಗಳ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ತಮ್ಮಲ್ಲಿ ಏನು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದರು, ಈ ವಿಷಯದಲ್ಲಿ ನಾನು ಯಾವುದೇ ರೀತಿಯ ಪದವನ್ನು ಬಳಸಿಲ್ಲ, ಆದುದರಿಂದ ಸನ್ಮಾನ್ಯ ಸದಸ್ಯರುಗಳಲ್ಲಿ ನಾನು ತಮ್ಮ ಮುಖಾಂತರ ಮನವಿ ಮಾಡುತ್ತೇನೆ, ಇದರಲ್ಲಿ ಯಾವುದೇ ರೀತಿಯ ಅಪರಾಧವನ್ನು ಮಾಡುವಂತಹ ಕೆಲಸವನ್ನು ಮಾಡಿಲ್ಲ ಎಂದು ನಾನು ಈ ಸದನದಲ್ಲಿ ಸ್ಪಷ್ಟೀಕರಣ ಮಾಡಿ ಸದನದ ಕಲಾಪಗಳು ಸುವ್ಯವಸ್ಥಿತವಾಗಿ ನಡೆಯತಕ್ಕಂಥದ್ದಕ್ಕೆ ತಮ್ಮ ಮುಖಾಂತರ ಎಲ್ಲಾ ಸದಸ್ಯರಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈಗ ಎರಡು ದಿನಗಳ ಕಾಲ ಸದನ ನಡೆಯಲಿಕ್ಕೆ ಕಾಂಗ್ರೆಸ್ ಪಕ್ಷದವರು ಅವಕಾಶ ಮಾಡಿ ಕೊಟ್ಟಿಲ್ಲ ಎನ್ನತಕ್ಕಂತಹ ಮಾತನ್ನೂ ಕೂಡ ಮುಖ್ಯ ಮಂತ್ರಿಗಳು ಮತ್ತು ನಮ್ಮ ಈ ಸಾಲಿನಲ್ಲಿ ಕುಳಿತಿರತಕ್ಕಂತಹ ಕೆಲ ಜನರ ಅಭಿಪ್ರಾಯ ಇದೆ. ನಾವು ಮೊದಲನೇ ದಿನ ಈ ನಿಲುವಳಿ ಸೂಚನೆ ಮಂಡಿಸತಕ್ಕಂತಹ ಸಂದರ್ಭದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೇವೆ. ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ನಿಲುವಳಿ ಸೂಚನೆ ಬಂದಿದ್ದು, ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಲಿಕ್ಕೆ ನಾವು ಸಿದ್ದರಾಗಿದ್ದೇವೆ. ಆ ಬಗ್ಗೆ ಬೇರೆ ಮಾತಿಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಕುಮಾರಸ್ವಾಮಿಯವರು 13ನೇ ತಾರೀಖು ಬಿಎಂಐಸಿ ಪ್ರಾಜೆಕ್ಟ್ ವಿಷಯವಾಗಿ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿದ್ದಂತಹ ಮಾಜಿ ಮಂತ್ರಿ ಮತ್ತು ಮತ್ತೊಬ್ಬ ಪತ್ರಕರ್ತರು ಬಂದರು, ಬಂದು ಲಂಚ ಕೊಡತಕ್ಕಂತಹ ರೀತಿಯಲ್ಲಿ ಹೇಳಿದ್ದಾರೆಂದು ಪ್ರಿಂಟ್ ಮೀಡಿಯಾ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಕೂಡ ಬಂದಿದೆ. ಅದಕ್ಕೆ ನಾವು ಎರಡು ದಿನಗಳ ಕಾಲ ಒಂದು ಡೆಫನೆಟ್ ಆಗಿ, ಸ್ಪೆಸಿಫಿಕ್ ಪರ್ಪಸ್ ಸಲುವಾಗಿ, ನಾವು ಇವತ್ತು ವಿರೋಧ ಪಕ್ಷದಲ್ಲಿ ಕುಳಿತು ಕೇಳಬೇಕಾದ್ದು ನಮ್ಮ ಕರ್ತವ್ಯ, ಅದನ್ನು ನಾವು ಮಾಡಿದ್ದೇವೆ. ಆ ದಿವಸ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಬೇರೆ ವಿಚಾರಗಳನ್ನೂ

ಕೂಡ ಪ್ರಸ್ತಾಪ ಮಾಡಿದ್ದಾರೆ; ಹಾಗೆ ಪ್ರಸ್ತಾಪ ಮಾಡತಕ್ಕಂತಹ ಅವಕಾಶ ಇರಲಿಲ್ಲ. ಇವತ್ತು ಏನು ಮಾತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಅದನ್ನು ಅದೇ ದಿವಸವೂ ಕೂಡ ಹೇಳಬೇಕಾಗಿತ್ತು. ಇದಾದ ನಂತರ ನಿನ್ನೆ "ಅನುಗ್ರಹದಲ್ಲಿ" ಕೂಡ ಪತ್ರಕರ್ತ ಮಿತ್ರರ ಜೊತೆ ಮತ್ತೆ ಮಾತನಾಡಿದ್ದಾರೆ. ಇವರಿಗೆ ಇವರು ವೆಲ್‌ನಲ್ಲಿ ಕೂರುವುದು ಇದೇ ಕೆಲಸ ಎಂದು ಹೇಳಿದ್ದಾರೆ. 1952 ರಿಂದ ಯಾರ್‍ಯಾರು ವಿರೋಧ ಪಕ್ಷದ ನಾಯಕರಾಗಿ ವೆಲ್‌ನಲ್ಲಿ ಕುಳಿತು ಕೆಲಸ ಮಾಡಿದ್ದಾರೆ, ಮಾನ್ಯ ದೇವರಾಜ ಅರಸ್‌ರವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ಯಾವ ರೀತಿಯಾಗಿ ಅವರನ್ನು ಫಿಸಿಕಲಿ ಹೊರಗೆ ಹಾಕಿದ್ದಾರೆ ಎನ್ನತಕ್ಕಂಥದ್ದು ಗೊತ್ತಿದೆ. ಸನ್ಮಾನ್ಯ ಬಂಗಾರಪ್ಪನವರೂ ಕೂಡ ಮುಖ್ಯ ಮಂತ್ರಿಗಳಾಗಿದ್ದಾಗ ಯಾವ ರೀತಿಯಾಗಿ ಕಾರ್ಯಕಲಾಪ ನಡೆಯುತ್ತಿತ್ತು ಎಂದು ಎಲ್ಲಾ ಕೂಡ ನಿದರ್ಶನ ಇದೆ. ಇವತ್ತು ನಾನು ಇಷ್ಟೇ ಹೇಳುತ್ತಿದ್ದೇನೆ, ಬಹಳ ಜವಾಬ್ದಾರಿಯುತವಾಗಿ ತಾವು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದೀರಿ, ಯಾವಾಗಲೂ ಕೂಡ ಧರ್ಮ್‌ಸಿಂಗ್‌ರವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ನಿವೃತ್ತಿಯಾದ ಮೇಲೆ ಇದೇ ತರಹದ ಧಾಟಿಯಲ್ಲಿ ಕೆಲಸ ಮಾಡುತ್ತಿದ್ದೀರಿ. ಇದೆಲ್ಲಾ ನಿಮಗೆ ಶೋಭೆ ತರತಕ್ಕಂಥದ್ದು ಅಲ್ಲ, ಇವು ಸೌಜನ್ಯದ ಮಾತುಗಳು ಅಲ್ಲ, ರಾಜ್ಯದ ಹಿತದೃಷ್ಟಿಯಿಂದ ರಾಜ್ಯದ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡತಕ್ಕಂತಹ ಏನು ಅವಕಾಶ ಸಿಕ್ಕಿದೆ ಅದನ್ನು ಸರಿಯಾಗಿ ಉಪಯೋಗಿಸಿ ಕೊಳ್ಳಿ. ಇಂತಹ ಸಂದರ್ಭದಲ್ಲಿ ಸ್ಪಷ್ಟವಾದ ಹೇಳಿಕೆ ಕೊಡಲಾರದ್ದಕ್ಕೆ ಇವೆಲ್ಲಾ ಪರಿಸ್ಥಿತಿಗಳು ಇವತ್ತಿನ ದಿವಸ ಉದ್ಭವವಾಗಿವೆ. ನಾನು ಇದರ ಬಗ್ಗೆ ಬಹಳಷ್ಟು ಪ್ರಸ್ತಾಪ ಮಾಡುತ್ತಿಲ್ಲ, ನಾವು ಮಾಡತಕ್ಕಂಥದ್ದು ಸ್ಪೆಸಿಫಿಕ್ಕಾಗಿ ಅಡ್ಜರ್ನ್‌ಮೆಂಟ್ ಮೋಷನ್ ಏನು ನಾವು ಮೂವ್ ಮಾಡಿದ್ದೇವೆ, ಮತ್ತು ನಾವು ಕೇಳಿದ್ದೇವೆ, ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ; ನಿಮ್ಮ ಕೊಠಡಿಯಲ್ಲಿ ಕೂಡ ಸುಮಾರು ಒಂದು ಗಂಟೆ ಕಾಲ ಸುದೀರ್ಘವಾಗಿ ಚರ್ಚೆ ಆಗಿದೆ, ಅದಕ್ಕೆ ಅವರು ಇವತ್ತು ಅಲ್ಲಗಳೆಯುತ್ತಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ, ರಾಜ್ಯದ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಪ್ರಸ್ತಾವವನ್ನು ನಾವು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಛೇಂಬರ್‌ನಲ್ಲಿ ಸಭೆ ನಡೆದು, ಆ ಸಭೆಯಲ್ಲಿ ಕೆಲವು ವಿಷಯಗಳನ್ನು ಮತ್ತು ಆ ವಿಷಯದ ಮೇಲೆ ಸ್ಪಷ್ಟೀಕರಣವನ್ನು ಮಾಡತಕ್ಕಂಥದ್ದು ಆಗಿದೆ. ಅದಾದ ಮೇಲೆ ಸದನದಲ್ಲಿ ನಾವು ಸೇರಿ ಮಾನ್ಯ ಮುಖ್ಯಮಂತ್ರಿಗಳ ವತಿಯಿಂದ ಒಂದು ಹೇಳಿಕೆಯನ್ನು ಕೊಡಿಸುತ್ತೇವೆ, ಯಾವ

ಒಂದು ವಿಷಯದ ಮೇಲೆ ಸಂಶಯ ಇವತ್ತು ಎಲ್ಲಾ ಕಡೆ ಬಂದಿದೆ, ಆ ಸಂಶಯವನ್ನು ನಿವಾರಣೆ ಮಾಡತಕ್ಕಂತಹ ಕೆಲಸ ಅವರು ಮಾಡುತ್ತಾರೆ ಎನ್ನತಕ್ಕಂತಹ ಮಾತನ್ನು ತಾವು ಹೇಳಿದ ಮೇಲೆ ನಾವೂ ಕೂಡ ಒಪ್ಪಿಕೊಂಡು ಇವತ್ತು ಧರಣಿಯನ್ನು ಬಿಟ್ಟು ನಮ್ಮ ನಮ್ಮ ಸ್ಥಳಗಳಲ್ಲಿ ಬಂದು ಕುಳಿತಿದ್ದೇವೆ. ನಾವು ಎರಡು ದಿವಸ ಧರಣಿ ಮಾಡಿದ್ದು ಕೇವಲ ಈ ಸದನದ ಕಾಲಹರಣ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲ. ಆದರೆ ಇಡೀ ದೇಶ ಮತ್ತು ರಾಜ್ಯದಲ್ಲಿ ಒಂದು ಸಂಶಯದ ವಾತಾವರಣ ಸೃಷ್ಟಿಯಾಗಿದೆ. ಏನು ಶ್ರೀಮಾನ್ ಧರ್ಮ್‌ಸಿಂಗ್‌ರವರ ನೇತೃತ್ವದಲ್ಲಿ ಇದ್ದಂತಹ ಸರ್ಕಾರದ ಒಬ್ಬ ಮಂತ್ರಿ ಮತ್ತು ಇನ್ನೊಬ್ಬರು ಪತ್ರಕರ್ತರು ಅವರಿಬ್ಬರೂ ಹೋಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವೊಲಿಸುವುದಕ್ಕೋಸ್ಕರ ಲಂಚವನ್ನು ಕೊಡುತ್ತೇವೆಂದು ಹೇಳಿದರು ಎನ್ನತಕ್ಕಂತಹ ಮಾತು ಪತ್ರಿಕೆಗಳಲ್ಲಿ ಬರುವುದಲ್ಲದೆ, ಸ್ಪಷ್ಟವಾಗಿ ಇನ್‌ವೆರ್‌ಟೆಡ್ ಕಾಮದಲ್ಲಿ ಬಂದಿದೆ. ಏಕೆಂದರೆ ಪತ್ರಿಕೆಗಳಿಗೆ ನಾವು ಒಂದು ಸಾರಿ ನಂಬುತ್ತೇವೆ, ಅನಾನುಕೂಲವಾದಾಗ ಡಿನೈ ಮಾಡುತ್ತೇವೆ, ಒಂದು ಸಾರಿ ವೀಡಿಯೋಗೆ ನಂಬುತ್ತೇವೆ, ಒಂದು ಸಾರಿ ಬೇರೆ ಬೇರೆ ರೀತಿಯಲ್ಲಿ ನಮಗೆ ಅನುಕೂಲ ಇದ್ದಂತೆ ರೀತಿಯಲ್ಲಿ ಹೋಗುತ್ತೇವೆ. ಈಗ ಅವರು ಹೇಳಿದ ಪ್ರಕಾರ ಇದರಲ್ಲಿ ಇನ್‌ವರ್‌ಟೆಡ್ ಕಾಮಾದಲ್ಲಿ ಏನಿದೆ, "Following his return from Middle East on Monday, Mr. Kumaaraswamy said 'A journalist met me and tried to trap me into a deal by offering me a bribe. I do not want to disclose anything more than this now." ಎನ್ನತಕ್ಕಂತಹ ಮಾತು ಇದರಲ್ಲಿ ಬಂದಿದೆ. ಪತ್ರಿಕೆಯಲ್ಲಿ ಬಂದಿರುವಂತಹ ಮಾತು ಸುಳ್ಳು ಇದು ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದಾರೆ. ಇದು ಸಂತೋಷದ ಸಂಗತಿ. ಇನ್ನು ಮೇಲೆ ನಾವು ಏನು ಪೇಪರ್‌ಗಳು ಓದಬೇಕೋ ಬಿಡಬೇಕೋ ಅಥವಾ ಇಲ್ಲಿಬರತಕ್ಕಂಥದ್ದು ಎಲ್ಲ ನಂಬ ಬೇಕೋ ನಂಬಬಾರದೋ ಎನ್ನತಕ್ಕಂಥದ್ದು ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ನಾಳೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅವರು ಎಷ್ಟೇ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ಕೊಟ್ಟರೂ ಕೂಡ, ಮಾಡುತ್ತೇನೆಂದು ಹೇಳಿದರೂ ಕೂಡ ಅದೂ ಕೂಡ ಪತ್ರಿಕೆಯಲ್ಲೇ ಬರುತ್ತದೆ. ಕೊನೆಗೆ ಅಭಿವೃದ್ಧಿ ಕೆಲಸದ ಪ್ರಚಾರವಾಗಲಿ ಎಂದು ಹೇಳಿ ಪತ್ರಿಕೆಯಲ್ಲಿಯೇ ನಾವು ಪ್ರಿಂಟ್ ಮಾಡಿ ಕೊಡುತ್ತೇವೆ. ಇದು ಸಹಜ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಕೂಡ ಈ ಒಂದು ಪತ್ರಿಕೆ ಇದು ನಾಲ್ಕನೇ ಕಂಬ, Fourth estate

ಎನ್ನತಕ್ಕಂಥದ್ದು ನಮ್ಮೆಲ್ಲರ ಅನಿಸಿಕೆ. ಆದರೆ ಇವತ್ತು ತಾವು ಏನೂ ಇಲ್ಲವೆಂದು ಡಿನೈ ಮಾಡಿದ್ದೀರಿ ಇದರಲ್ಲಿ ಏನೂ ಇಲ್ಲ ಅಂತ ಸಂತೋಷ. ಆದರೆ ಮತ್ತೊಂದು ಪುಷ್ಟಿ ಕೊಟ್ಟಿರಿ. ಅದೇನು ನಿಮಗೆ ಜೋಷು ಬಂದಿತೋ ಗೊತ್ತಿಲ್ಲ. ಅನುಗ್ರಹಕ್ಕೆ ಹೋದ ಕೂಡಲೇ ಜೋಷ್ ಬಂದು ಬಿಟ್ಟಿದೆ. ನೀವು ಖಾಲಿ ಮಾಡಿದಿರಿ, ಅವರು ಭರ್ತಿ ಮಾಡಿದರು. ಧರ್ಮ್‌ಸಿಂಗ್ ಸಾಹೇಬರು ಖಾಲಿ ಮಾಡಿದ ತಕ್ಷಣ, ಅವರು ಹೋದ ಮೇಲೆ ಅವರಿಗೆ ಜೋಷ್ ಬಂದಿತು. ಆ ಜೋಷನಲ್ಲಿ ನಿನ್ನೆ ಏನು ಹೇಳಿದ್ದಾರೆಂದರೆ, ಇದು ಕಾಂಟ್ರವರ್ಸಿ ಎನ್ನುತ್ತೀರೋ, ಅಥವಾ ತಿಳಿದು ಹೇಳಿದ್ದಾರೋ, ತಿಳಿಯದೇ ಹೇಳಿದ್ದಾರೋ, ಹೇಗೂ ಈ ಇಶ್ಯೂ ಕ್ಲೋಸ್ ಆಗಿತ್ತು. ನಾನು ನಾಳೆ ಹೇಳುತ್ತೇನೆಂದು ಹೇಳಿದ ಮೇಲೆ, ಪುನಃ ಪತ್ರಿಕೆಯಲ್ಲಿ ಅವರು ಏನು ಹೇಳಿದ್ದಾರೆಂದರೆ, ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ, ರಿಲವೆಂಟ್ ಪೋರ್ಷನ್ ಮಾತ್ರ ಓದುತ್ತೇವೆ. ಒಂದು ವಾರ ಅಲ್ಲ, 20 ದಿನ ಬೇಕಾದರೂ ಚರ್ಚಿಸಿ ಎಂದು ಆಹ್ವಾನಿಸಿದ್ದೇನೆ. ಉತ್ತರ ನೀಡಲು ನಾನು ಸಿದ್ಧನಿದ್ದೇನೆ. ಚರ್ಚೆ ಮಾಡಲಿ, ಮಾನ್ಯ ಧರ್ಮ್‌ಸಿಂಗ್‌ರವರು ವಿಶ್ವಾಸಮತ ಕಳೆದುಕೊಂಡು ದಿನದಿಂದಲೇ ಅವರಲ್ಲಿ ಧರಣಿ ಮಾಡುವ ಪ್ರವೃತ್ತಿ ಆರಂಭವಾಗಿದೆ; ಇನ್ನೂ ನಿಂತಿಲ್ಲ. ಹಾಗೆ ಮುಂದೆ ಹೇಳುತ್ತಾರೆ, ಕಲಾಪ ನಡೆಸಲು ಅವಕಾಶ ನೀಡದೆ ಸಭಾಧ್ಯಕ್ಷರ ಭಾವನೆಗಳಿಗೂ ಅಗೌರವ ನೀಡುವ ಧೋರಣೆ ಸರಿಯಲ್ಲ ಎಂದರು. ಮುಂದೆ ಹೇಳುತ್ತಾರೆ, ಲಂಚದ ಆಮಿಷದ ಹೇಳಿಕೆ ಕುರಿತಂತೆ ಕಾಂಗ್ರೆಸ್‌ನ ಒತ್ತಾಯದ ಬಗೆಗೆ ಗಮನ ಸೆಳೆದಾಗ, ಈ ಬಗೆಗೆ ಇನ್‌ಕ್ಯಾಮರಾ ಸಭೆ ನಡೆಸೋಣ, ಸಂಪೂರ್ಣವಾಗಿ ಅಂಕಿಅಂಶ ನೀಡುತ್ತೇನೆ; ಸಂವಾದ ಆಗಲಿ, ಯಾರು ಸರಿ ತಪ್ಪು ಎನ್ನುವುದು ನಿರ್ಧಾರವಾಗಲಿ ಅಂದರೆ ಬ್ರೈಬ್ ಬಗ್ಗೆ ಕೆಟಗರಿಕಲಿ ಅವರು ಹೇಳಿಲ್ಲ. ಈಗ ಇಲ್ಲ ಅದು ಸುಳ್ಳು ಎನ್ನುವಂತಹ ಮಾತು ಈಗ ಏನು ಹೇಳಿದರು, ಆ ಮಾತು ಅವರಿಗೆ ಏಕೆ ನಿನ್ನೆ ಹೇಳಲಿಲ್ಲ? ಇದೇ ಪತ್ರಿಕೆಯಲ್ಲಿ ನಿಮ್ಮ ಹೇಳಿಕೆನೇ ಇದೆ. ಇಲ್ಲ ಇದನ್ನೂ ಡಿಸೈ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಅದು ನಾನು ನಿನ್ನೆ ಸಾಯಂಕಾಲ ಕೊಟ್ಟಿರತಕ್ಕಂಥಾದ್ದಲ್ಲ. ನಿನ್ನೆ ಮಧ್ಯಾಹ್ನ ನನಗೆ ಪತ್ರಿಕಾ ಸ್ನೇಹಿತರು ಪ್ರಶ್ನೆಯನ್ನು ಮಾಡಿದರು. ನಿನ್ನೆ ಬೆಳಿಗ್ಗೆ ಸಭೆ ನಡೆದಂತಹ ಸಂದರ್ಭದಲ್ಲಿ ನಾನು ಸಭಾಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು ಸಭೆಯ ವಿಷಯದಲ್ಲಿ ಚರ್ಚೆ ಮಾಡಿ, ಸಭೆಯನ್ನು ತಪ್ಪುದಾರಿಗೆ ಎಳೆಯತಕ್ಕಂಥಾದ್ದಕ್ಕೆ ಮುಖ್ಯಮಂತ್ರಿಗಳು ಕೊಠಡಿಯಲ್ಲಿ ಕುಳಿತು ಮಾನ್ಯ ಸಭಾಧ್ಯಕ್ಷರ ಜೊತೆಯಲ್ಲಿ ಇವತ್ತು ಮಾತನಾಡಿ

ನಂತರ ಇಲ್ಲಿ ಬಂದು ಒಂದು ತೀರ್ಮಾನ ಮಾಡಿದರು ಎಂದು ವಿರೋಧ ಪಕ್ಷದ ಕಡೆಯಿಂದ ಆಪಾದನೆ ಬಂದಿದೆ ಎಂದು ನಿನ್ನೆ ಮಧ್ಯಾಹ್ನ ನನಗೆ ಗಮನಕ್ಕೆ ತಂದರು. ಇದು ನಾನು ಮಧ್ಯಾಹ್ನ ಕೊಟ್ಟಂತಹ ಹೇಳಿಕೆ. ಆದರೆ ನಾವೆಲ್ಲಾ ಮತ್ತೆ ಸಾಯಂಕಾಲ ಕುಳಿತು ಏನು ಚರ್ಚೆ ಮಾಡಿದೆವು, ಆ ಚರ್ಚೆ ಆದನಂತರ ಹೇಳಿರತಕ್ಕಂಥಾದ್ದು ಅಲ್ಲ. ಮಧ್ಯಾಹ್ನ ಮಾನ್ಯ ಸಭಾಧ್ಯಕ್ಷರು ಮತ್ತು ನಾನು ಕುಳಿತು ಬೆಳಿಗ್ಗೆಯ ಸದನದ ಸನ್ನಿವೇಶದ ಬಗ್ಗೆ ಕುಳಿತು ಚರ್ಚೆ ಮಾಡಿ ನಾನು ಮಾನ್ಯ ಸಭಾಧ್ಯಕ್ಷರೆ ಮೇಲೆ ಏನೋ ಒತ್ತಾಯವನ್ನು ತಂದಿದ್ದೇನೆ ಎನ್ನುವ ಆಪಾದನೆ ಬಂತು ಎಂದು ಪತ್ರಕರ್ತರು ಸ್ಪಷ್ಟೀಕರಣ ಕೇಳಿದಾಗ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿದಂತಹ ವಿಷಯ. ನಾವು ನಿನ್ನೆ ಸಾಯಂಕಾಲ ಏನು ಚರ್ಚೆ ಮಾಡಿದೆವು ಅದಕ್ಕಿಂತ ಮೊದಲೇ ಕೊಟ್ಟಿರತಕ್ಕಂಥ ಹೇಳಿಕೆ. ಇದರಲ್ಲಿ ನಾನು ಯಾರಿಗೂ ಅಗೌರವ ಸೂಚಿಸುವ ರೀತಿಯಲ್ಲಿ ಮಾಡಿಲ್ಲ. ಆ ಹೇಳಿಕೆ ಹಿಂದೆ ನಡೆದಂತಹ ಘಟನೆ ಬಗ್ಗೆ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇ, ಅತ್ಯಂತ ಗೌರವದಿಂದ ನಾನು ನಿಮಗೆ ಸಲಹೆ ಕೊಡುತ್ತೇನೆ. ಈ ಹೇಳಿಕೆ ಕೊಟ್ಟು ಮತ್ತೆ ಕನ್‌ಫ್ಯೂಷನ್ ಮಾಡಬೇಡಿ. ಏಕೆಂದರೆ ಮಧ್ಯಾಹ್ನ ಅದು ಹೇಳಿದ್ದು. ಹಾಗಾದರೆ ತಾವು ಹೇಳಿದ್ದು ನಿಜವಾಯಿತು. ಅದೇನೆಂದರೆ ಈ ಬಗೆಗೆ ಇನ್‌ಕ್ಯಾಮರಾ ಸಭೆ ನಡೆಸೋಣ, ಸಂಪೂರ್ಣವಾಗಿ ಅಂಕಿ ಅಂಶ ನೀಡುತ್ತೇನೆ, ಸಂವಾದ ಆಗಲಿ ಎಂದರೆ ಬ್ರೈಬ್ ಬಗ್ಗೆ ನಡೆದಂತಹ ಚರ್ಚೆ ಏನಿದೆ, ಅದೇನೂ ಸುಳ್ಳಲ್ಲ ಬೇಕಾದರೆ ಇನ್‌ಕ್ಯಾಮರಾ ಸಭೆ ನಡೆಸೋಣ, ಯಾರ್ಯಾರು ಇದ್ದರು ಅಥವಾ ಇಲ್ಲ ಎನ್ನುವ ರೀತಿಯಲ್ಲೇ ಕೋರ್ಟಿನಲ್ಲಿ ಏನು ನಡೆಯುತ್ತದೆ ಗಂಡ ಹೆಂಡತಿ ಜಗಳವನ್ನು ಇನ್‌ಕ್ಯಾಮರಾ ಮೀಟಿಂಗ್ ಮಾಡಿ ಅದನ್ನು ಜಡ್ಜ್‌ಸ್ ಸೆಟ್ಲ್ ಮಾಡುತ್ತಾರೆ. ಅದು ತಮಗೂ ಗೊತ್ತಲ್ಲಾ. ತಾವೂ ಕೂಡ ಇಂತಹ ಕೇಸಸ್ ಮಾಡಿರಬೇಕು ಫ್ಯಾಮಿಲಿ ಕೋರ್ಟ್‌ನಲ್ಲಿ. ಹಾಗೆ ಇವರು ಆಹ್ವಾನ ಕೊಟ್ಟಿದ್ದಾರೆ ಏನಂತ ಆ ರೀತಿ ಸಂಶಯ ಇದ್ದರೆ, ಬನ್ನಿ ಬೇಕಾದರೆ ತೋರಿಸುತ್ತೇನೆ ಬ್ರೈಬ್ ಕೊಡುವುದಕ್ಕೆ ಬಂದಿದ್ದರೋ ಇಲ್ಲವೋ ಎನ್ನುವಂತೆ ಇದೆ. ಅದಕ್ಕೆ ದಯವಿಟ್ಟು ಇಂತಹ ಹೇಳಿಕೆಯನ್ನು ಪದೇ ಪದೇ ಕೊಟ್ಟು ಇನ್ನೂ ಸಂಶಯಕ್ಕೆ ಎಡೆ ಮಾಡಿ ಕೊಡಬೇಡಿ. ಸ್ಪಷ್ಟವಾಗಿ ಹೇಳಿ, ನಾನು ಹೇಳಲಿಲ್ಲ, ಅದು ತಪ್ಪು, ಸತ್ಯಕ್ಕೆ ದೂರವಾದುದು ಎಂದೋ ಅಥವಾ ನಾನು ಹೇಳಿದ್ದೇ ಬೇರೆ ಅದು ಬಂದಿದ್ದೇ ಬೇರೆ ಎಂದು ಹೇಳುತ್ತಿದ್ದಿರಿ, ದಯವಿಟ್ಟು ಅದಕ್ಕಾದರೂ ಸ್ಪಿಕಾನ್ ಆಗಿ ಮಾನ್ಯ ಎಂ.ಪಿ.ಪ್ರಕಾಶ್‌ರವರೇ, ತಾವು ಇಷ್ಟಾದರೂ

ಹೇಳಿಕೊಡಿ. ಮತ್ತೆ ನೀವು ಯಾರು ಹೇಳೋಕೆ ಎಂದು ಹೇಳುವುದು ಬೇಡ. ಸದನದ ಸಮಯವನ್ನು ಹರಣ ಮಾಡಬಾರದು ಎನ್ನುವ ಮಾತನ್ನು ಮಾನ್ಯ ಅಧ್ಯಕ್ಷರೇ, ಹೇಳಿದಿರಿ, ಅದನ್ನು ನಾವು ಒಪ್ಪುತ್ತೇವೆ. ನಾವೂ ಕೂಡ ಪರ್ಪಸ್ಲಿ, ಇಂಟೆನ್‌ಷನಲಿ ಈ ಸದನದ ಸಮಯವನ್ನು ಹಾಳು ಮಾಡಬೇಕು ಎನ್ನುವಂತಹ ದೃಷ್ಟಿಯಿಂದ ಮಾಡಿಲ್ಲ. ಈ ಹೇಳಿಕೆ ಬಂದಮೇಲೆ, ಪುನಃ ಅದಕ್ಕೆ ದೃಢೀಕರಿಸತಕ್ಕಂಥ ಹೇಳಿಕೆಯನ್ನು ಕೊಟ್ಟಮೇಲೆ ಅದನ್ನು ಅವರೇ ಒಪ್ಪಿಕೊಂಡ ಹಾಗೆ ಆಯಿತು. ಆದರೆ ಅವರು ಇಲ್ಲ ಆ ಹೇಳಿಕೆಯನ್ನು ಮುಂಜಾನೆ ಹೇಳಿದೆ, ಆದರೆ ಸಂಧಾನ ಸಾಯಂಕಾಲ ಆಯಿತು ಎಂದರೆ ಅರ್ಥ ಏನು? ಇದು ತಪ್ಪಾಗುತ್ತದೆ, ದಯವಿಟ್ಟು ಇಂತಾದ್ದಕ್ಕೆ ಅವಕಾಶ ಮಾಡಿಕೊಡಬೇಡಿ. ಸುಮ್ಮಸುಮ್ಮನೆ ಕುಸ್ತಿಗೆ ಅನಾವಶ್ಯಕವಾಗಿ ನಿಲ್ಲಬೇಡಿ. ಅದರಿಂದ ಏನಾಗುತ್ತದೆ? ನಿಮಗೂ ತೊಂದರೆ, ನಾವಂತೂ ತೊಂದರೆ ಸಹಿಸಿಕೊಳ್ಳುವುದಕ್ಕೆ ಬಂದಿದ್ದೇವೆ, ಏಕೆಂದರೆ ನೀವೇನು ನಾವು ಹೇಳಿದ್ದನ್ನೆಲ್ಲಾ ಮಾಡುವವರು ಅಲ್ಲ. ನಾವು ನಿರ್ಣಯ ಮಾಡಿಕೊಂಡೇ ಬಂದಿದ್ದೇವೆ. ನಾವು ಯಾವ ಜಾಗದಲ್ಲಿರುತ್ತೇವೆ, ಆ ಜಾಗದಲ್ಲಿ ಇದ್ದಾಗ ನಮಗೆ ತೊಂದರೆ ಆಗುತ್ತದೆ. ನಮಗೆ ಅನ್ಯಾಯವಾಗುತ್ತದೆ; ಈ ಎಲ್ಲಾ ಮಾತುಗಳು ನಮಗೆ ಗೊತ್ತಿದೆ. ಅದರ ಅರಿವು ಇಟ್ಟುಕೊಂಡೇ ನಾವು ಅನೇಕ ಸಾರಿ ಸತ್ಯಾಂಶಗಳನ್ನು ಜನರ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಜನ ಅದನ್ನು ಒಪ್ಪಲಿ, ಬಿಡಲಿ, ಆದರೆ ಇದ್ದುದ್ದನ್ನು ಇದ್ದ ಹಾಗೆ ಹೇಳತಕ್ಕಂಥ ಕೆಲಸವನ್ನೂ ಮಾಡತಕ್ಕಂಥಾದ್ದು ನಮ್ಮ ಧರ್ಮ. ಅದರಲ್ಲಿ ಸತ್ಯಾಂಶ ಇದ್ದರೆ ನೀವು ತೆಗೆದುಕೊಳ್ಳಿ, ಸತ್ಯಾಂಶ ಇಲ್ಲವೆಂದರೆ ಬಿಟ್ಟುಬಿಡಿ. ಆ ಮಾತು ಬೇರೆ; ಅದಕ್ಕಾಗಿ ಇಷ್ಟು ಮಾತನ್ನು ಮಾತ್ರ ನಾನು ತಮ್ಮ ಮುಖಾಂತರ ಹೇಳುತ್ತೇನೆ. ಈ ರೀತಿಯಾಗಿ ಗೊಂದಲವನ್ನು ಸೃಷ್ಟಿ ಮಾಡಿ ಒಬ್ಬರಿಗೊಬ್ಬರು ಮಸಿ ಬಳಿಯುವಂತಹ ಕೆಲಸ ಮಾಡಬಾರದು. ಈ ರೀತಿ ಮಸಿ ಬಳಿಯುವಂತಹ ಕೆಲಸ ಮಾಡಿದರೆ ಇದಕ್ಕೆ ಎಂದಿಗೂ ಕೂಡ ಅಂತ್ಯವಿಲ್ಲ. ಮತ್ತು ಈ ದೃಷ್ಟಿಯಿಂದ ನಾವು ಇದೇ ರೀತಿ ಹೋದರೆ ಖಂಡಿತವಾಗಿ ಸದನದ ಗೌರವ ಕಡಿಮೆಯಾಗುತ್ತಿದೆ; ಸದಸ್ಯರ ಗೌರವ ಕಡಿಮೆಯಾಗುತ್ತಿದೆ. ಇನ್ನು ಹೊರಗಡೆ ಹೋದ ಕೂಡಲೇ ನಾವು ಹೇಗೆ ಎನ್ನುವುದರ ಬಗ್ಗೆ ಜನ ಮಾತನಾಡುತ್ತಾರೆ. ಇಲ್ಲ ಪ್ರಪಂಚ ಹಾಗೆ ಇದೆ, ನಾವು ಹಾಗೆ ಮಾಡೋಣ ಎಂದರೆ ಅದು ಬೇರೆ. ಆದರೆ ನಾವು ಇಷ್ಟು ಕಡಿಮೆ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಕರಪ್‌ಷನ್ ಇರಬಹುದು, ಇಲ್ಲವೆಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಆದರೆ ಅದನ್ನು ನೀವು ಎಷ್ಟು ಕಡಿಮೆ ಮಾಡುತ್ತೀರಿ ಎನ್ನುವುದು

ಮುಖ್ಯ. ಅಥವಾ ಆದಷ್ಟು ಒಳ್ಳೆಯ ಆಡಳಿತವನ್ನು ಹೇಗೆ ಕೊಡುತ್ತೀರಿ ಎನ್ನುವುದೂ ಕೂಡ ಮುಖ್ಯ. ಆದಷ್ಟು ಕಾನೂನಿನ ವ್ಯವಸ್ಥೆಯನ್ನು ಹೇಗೆ ಇಡುತ್ತೀರಿ ಎನ್ನುವುದು ಮುಖ್ಯ. ಹಾಗೂ ಆ ಕಾನೂನಿನ ಚೌಕಟ್ಟಿನಲ್ಲಿ ಆಡಳಿತವನ್ನು ಹೇಗೆ ನಡೆಸುತ್ತೀರಿ ಎನ್ನುವುದು ಮುಖ್ಯ. ಇಲ್ಲ ನಮಗೆ ಅಧಿಕಾರ ಇದೆ, ನಾವು ಬೇಕಾದ ಹಾಗೆ ಟ್ರಾನ್ಸ್‌ಫರ್ ಮಾಡುತ್ತೇವೆ ಎಂದರೆ, ಅರೆ ಅದಕ್ಕೂ ರೂಲ್ಸ್ ಇದೆ. ಅದಕ್ಕೂ ಕಮಿಟಿಗಳು ಇವೆ. ಆ ಕಮಿಟಿಯಲ್ಲಿ ಇಟ್ಟು ಮಾಡಬೇಕೆಂದಿದೆ. ಎರಡೂ ವರ್ಷಕ್ಕಿಂತಲೂ ಜಾಸ್ತಿ ಕೊಡಬಾರದೆಂದು ನೀವೇ ಮಾಡಿಕೊಂಡಿದ್ದೀರಿ. ಖಾಲಿಯಾದರೆ, ಸತ್ತರೆ, ಪ್ರಮೋಷನ್ ಆದರೆ ಕೊಡಬೇಕೆಂದು ಇದೆ. ಆದರೆ ಆ ವಿಚಾರಗಳನ್ನೆಲ್ಲಾ ಮುಂದೆ ಮಾತನಾಡೋಣ. ಎಂದರೆ ಕಾನೂನನ್ನು ಪ್ರತಿಯೊಂದಕ್ಕೆ ನಾವು ಮಾಡಿಕೊಂಡಿದ್ದೇವೆ. ರೂಲ್ಸ್ ಪ್ರತಿಯೊಂದಕ್ಕೂ ಏನು ಮಾಡಿಕೊಂಡಿದ್ದೇವೆ, ರೂಲ್ಸ್ ಪ್ರತಿಯೊಂದಕ್ಕೂ ಏನು ಮಾಡಿಕೊಂಡಿದ್ದೇವೆ, ಆ ರೂಲ್ಸ್‌ನ ಚೌಕಟ್ಟಿನಲ್ಲಿ ನಾವು ನಡೆಯಬೇಕು ಎನ್ನುವ ಅಪೇಕ್ಷೆ ಜನರದ್ದೂ ಇರುತ್ತದೆ, ವಿರೋಧ ಪಕ್ಷದ್ದೂ ಇರುತ್ತದೆ ಹಾಗೂ ಸರ್ಕಾರ ಆ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವ ಭಾವನೆ ಕೂಡ ಇದೆ. ಆದರೆ, ನೀವು ನಡೆದುಕೊಂಡಿಲ್ಲ, ಹಿಂದೆ ಯಾರು ನಡೆದುಕೊಂಡಿದ್ದಾರೆ 50 ವರ್ಷದಿಂದ ಏನು ಮಾಡಿದ್ದೀರಿ ಎಂದು ಹೇಳಿದರೆ ಇದು ಉತ್ತರವೇ? ಇವು ಉತ್ತರಗಳಲ್ಲ. ಹಿಂದೆ ಮಾಡಿಲ್ಲ, ಈಗ ನಿಮಗಿಂತ ಚೆನ್ನಾಗಿ ಮಾಡಿದ್ದೇವೆ ಎಂದು ಹೇಳಿದರೆ ಅದಕ್ಕೆ ಏನಾದರೂ ಶಹಬ್ಬಾಸ್‌ಗಿರಿ ಕೊಡುತ್ತೇವೆ. ಇಲ್ಲ ನಿಮಗಿಂತ ಕೆಟ್ಟದ್ದು ಮಾಡಿ ನಾನು ಒಳ್ಳೆಯದು ಮಾಡಿದ್ದೇನೆ ಎಂದು ಹೇಳಿಕೊಂಡರೆ ಯಾರೂ ಕೂಡ ಶಹಬ್ಬಾಸ್‌ಗಿರಿ ಕೊಡುವುದಿರಲಿ ಆ ಆಡಳಿತದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವುದಿಲ್ಲ. ದಯವಿಟ್ಟು ಇನ್ನು ಮೇಲೆ ಇಂತಹ ಘಟನೆಗಳು ನಡೆಯಬಾರದು. ಅದಕ್ಕೆ ಅವಕಾಶ ಮಾಡಿಕೊಡಬಾರದು. ಮತ್ತು ಅನಾವಶ್ಯಕವಾಗಿ ಯಾವುದೇ ಪಕ್ಷವಾಗಲಿ ಮುಖಂಡನಾಗಲಿ, ಮಂತ್ರಿಯಾಗಲಿ, ಜರ್ನಲಿಸ್ಟ್ ಆಗಲಿ ಅವರ ಮೇಲೆ ಗೂಬೆ ಕೂರಿಸತಕ್ಕಂಥ ಪ್ರಯತ್ನ ನಡೆಯಬಾರದು ಎನ್ನುವ ಮಾತನ್ನು ತಮ್ಮ ಮುಖಾಂತರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಈಗ ಇಲ್ಲಿಗೆ ಇದನ್ನು ಮುಕ್ತಾಯ ಮಾಡೋಣ.